ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/ /2021-22 ದಿನಾಂಕ : 24/11/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 24/11/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಕು|| ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ ಮುತ್ತುರಾಜು ಕೆ.ಪಿ, ಅರಣ್ಯ ವಲಯ
5. ಶ್ರೀ ಪಿ.ಎಂ ಮಲಯಾದ್ರಿ, ಕೆಲಸ ಪರಿವೀಕ್ಷಕರು, ತೋಟಗಾರಿಕೆ
6. ಶ್ರೀ ಹನುಮಂತ ಉಪ್ಪಾರ್, ಪಿ.ಎಸ್.ಐ, ಅರಕ್ಷಕ ಠಾಣೆ
7. ಶ್ರೀ ಹರೀಶ್ ಜೆ, ತೆರಿಗೆ ಪರಿವೀಕ್ಷಕರು
8. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು.

**ನೋಡೆಲ್ ಅಧಿಕಾರಿ** ರವರು ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ಗುರುದರ್ಶನ್ ಲೇಔಟ್ ನಲ್ಲಿ ಕಸ ವಿಲೇವಾರಿ ಮಾಡದೆ ಇರುವುದು, ಒಣ ಕಸ ವಿಲೇವಾರಿ ಅಸಮರ್ಪಕ ನಿರ್ವಹಣೆ, ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ಸ್ವಚ್ಛ ಮಾಡುವ ಸಿಬ್ಬಂದಿಗಳ ಸಂಖ್ಯೆ ಕಡಿಮೆ ಇರುವುದು, ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಬಿಬಿಎಂಪಿ ಸಿಬ್ಬಂದಿಗೆ ಕಸ ನೀಡದೆ ಇರುವವರ ಬಗ್ಗೆ ಗಮನ ಹರಿಸುವುದು, ನಂಜಪ್ಪ ಸರ್ಕಲ್‌ಗೆ ಹೋಗುವ ರಸ್ತೆಯಲ್ಲಿ ನಂದಿನಿ ಬೇಕರಿ ಎದುರು ಇರುವ ಬ್ಲಾಕ್‌ಸ್ಪಾಟ್‌ಅನ್ನು ತೆರವುಗೊಳಿಸಲು ಹಾಗೂ ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ತೆಂಗಿನಕಾಯಿ ಚಿಪ್ಪುಗಳನ್ನು ಹಾಕಿ ಹಾಗೆಯೇ ಬಿಟ್ಟು ಹೋಗಿರುವುದರಿಂದ ಸೊಳ್ಳೆಗಳು ಹೆಚ್ಚಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಂಭವವಿರುವುದರಿಂದ ಸರಿಪಡಿಸಲು ಕೋರಿದರು.

ಕ್ರಮ: ಸ.ಕಾ.ಅ, ಹ.ಶ್ಯಾ.ನಿ

ಸರ್ ಎಂ.ವಿ ಲೇಔಟ್ 13ನೇ ಅಡ್ಡರಸ್ತೆ ಹತ್ತಿರ ಬೆಸ್ಕಾಂ ಕೇಬಲ್ ಅಳವಡಿಸಲು, ಬಿ.ಇ.ಎಲ್ ವೈಟ್ ಸ್ಕೇರ್ ಎದುರು ಚೆಲ್ಲಾಪಿಲ್ಲಿಯಾಗಿರುವ ಕೇಬಲ್‌ಗಳನ್ನು ಸರಿಪಡಿಸುವುದು ಹಾಗೂ ಮರದ ಕೊಂಬೆಗಳ ಮೇಲೆ ವಿದ್ಯುತ್ ತಂತಿಗಳು ತಾಗುತ್ತಿರುವುದರಿಂದ ಮರದ ಕೊಂಬೆಗಳನ್ನು ಟ್ರಿಮ್ ಮಾಡಲು ಕೋರಿದರು.
ಕ್ರಮ: ಸಕಾಅ, ಬೆಸ್ಕಾಂ

ಶ್ರೀ ಸಾಯಿ ಅಪಾರ್ಟ್‌ಮೆಂಟ್ ಹಿಂಭಾಗ ಕೆಲವರು ಗಾಂಜ ಹಾಗೂ ಇನ್ನಿತರೆ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ತಡೆಯಲು, ಜಿ.ಕೆ.ವಿ.ಕೆ ರಿಂಗ್ ರಸ್ತೆ ಹತ್ತಿರ ಧೂಮಪಾನ ಮತ್ತಿತರೆ ಚಟುವಟಿಕೆಗಳು ನಡೆಯುತ್ತಿರುವುದರಿಂದ ಗಮನ ಹರಿಸಲು ಕೋರಿದರು.
ಕ್ರಮ: ಪೋಲೀಸ್ ಇನ್ಸ್‌ಪೆಕ್ಟರ್, ವಿದ್ಯಾರಣ್ಯಪುರ

ವಿದ್ಯಾರಣ್ಯಪುರ ಮುಖ್ಯ ರಸ್ತೆ ಹಾಗೂ ಇತರೆ ಬಡಾವಣೆಗಳ ಮುಖ್ಯ ರಸ್ತೆಗಳಲ್ಲಿ ವಾಹನ ನಿಲುಗಡೆಯಾಗುತ್ತಿರುವುದರಿಂದ ರಸ್ತೆ ಬದಿಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ ಸರಿಪಡಿಸಲು ಕೋರಿದರು.
ಕ್ರಮ: ಸಂಚಾರಿ ಪೋಲೀಸ್ ಠಾಣೆ, ಯಲಹಂಕ

ನರಸೀಪುರ ಕೆರೆಯಲ್ಲಿ ಮರ ಮುರಿದು ಬಿದ್ದಿರುವುದನ್ನು ತೆರವುಗೊಳಿಸಲು, ಲೇಕ್ ಶೋರ್ ಗಾರ್ಡನ್‌ನಲ್ಲಿ ಬೃಹದಾಕಾರದ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು, ಬಿ.ಇ.ಎಲ್ 1ನೇ ಬ್ಲಾಕ್ ಸ್ವತ್ತಿನ ಸಂಖ್ಯೆ 303ರ ಮುಂಭಾಗದಲ್ಲಿರುವ ಒಣ ಮರ ತೆರವುಗೊಳಿಸಲು ಕೋರಿದರು.
ಕ್ರಮ: ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ

ಸರ್ ಎಂ.ವಿ ಲೇಔಟ್ ಮತ್ತು ಬಿ.ಇ.ಎಲ್ ಬಡಾವಣೆಗಳ ರಸ್ತೆಗಳಲ್ಲಿ ಜಿಯೋ, ಏರ್‌ಟೆಲ್ ಮತ್ತಿತರ ಕಂಪೆನಿಗಳ ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆದು ಹಾಳು ಮಾಡಿರುವುದರಿಂದ ಸರಿಪಡಿಸಲು, ವಿದ್ಯಾರಣ್ಯಪುರ ಮುಖ್ಯ ರಸ್ತೆ ಓಲ್ಡ್ ಪೋಸ್ಟ್ ಆಫೀಸ್ ರಸ್ತೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ಅಗೆದು ಹಾಳು ಮಾಡಿರುವುದರಿಂದ ರಸ್ತೆ ಸರಿಪಡಿಸಲು ಹಾಗೂ ಸೆಲ್ಲರ್ ನೀರನ್ನು ಚರಂಡಿಗೆ ಬಿಡುತ್ತಿದ್ದು, ಚರಂಡಿಯಲ್ಲಿ ಮಣ್ಣು ಮತ್ತು ಹೂಳು ತುಂಬಿರುವುದರಿಂದ ನೀರು ಚರಂಡಿಗೆ ಹರಿಯದೆ ರಸ್ತೆಯಲ್ಲಿ ಹರಿಯುತ್ತಿರುವುದರಿಂದ ಸರಿಪಡಿಸಲು ಕೋರಿದರು.
ಕ್ರಮ: ಸ.ಕಾ.ಅ, ವಿ.ಉ.ವಿ

ಡಾ|| ಪುಷ್ಪಲತ, ಆರೋಗ್ಯಾಧಿಕಾರಿ ರವರು ವಿದ್ಯಾರಣ್ಯಪುರ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ವೈದ್ಯಕೀಯ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು, 3 ರಿಂದ 18 ವರ್ಷ ವಯಸ್ಸಿನ ಮಕ್ಕಳ ಪೌಷ್ಟಿಕ ಆಹಾರ ಒದಗಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖ್ಯಸ್ಥರಿಗೆ ಮುಂದಿನ ಸಭೆಯಲ್ಲಿ ಆಹ್ವಾನಿಸಲು ಕೋರಿದರು.

ನೋಡೆಲ್ ಅಧಿಕಾರಿಗಳು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ